ಕ್ರಮ ಸಂಖ್ಯೆ	ಇಲಾಖೆಯ ಹೆಸರು
1.	ಒಳಾಡಳಿತ ಮತ್ತು ಸಾರಿಗೆ ಇಲಾಖೆ
2.	ಆರ್ಥಿಕ ಇಲಾಖೆ
3.	ಶಿಕ್ಷಣ ಇಲಾಖೆ
4.	ಲೋಕೋಪಯೋಗಿ ಇಲಾಖೆ
5.	ಕಾನೂನು ಇಲಾಖೆ
6.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
7.	ಸಮಾಜ ಕಲ್ಯಾಣ ಇಲಾಖೆ
8.	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ
9.	ಕನ್ನಡ ಮತ್ತು ಸಂಸ್ಕೃತಿ ಇಲಾಖೆ
10.	ಕಾರ್ಮಿಕ ಇಲಾಖೆ
11.	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
12.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
13.	ನಗರಾಭಿವೃದ್ಧಿ ಇಲಾಖೆ
14.	ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
15.	ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ
16.	ಕೃಷಿ ಮತ್ತು ತೋಟಗಾರಿಕೆ ಇಲಾಖೆ
17.	ಕಂದಾಯ ಇಲಾಖೆ
18.	ಸಹಕಾರ ಇಲಾಖೆ
19.	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ
20.	ಯೋಜನೆ ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ಯಂತ್ರಕಲೆ ಇಲಾಖೆ
21.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
22.	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

ಭದ್ರಾ ಮೇಲ್ದಂಡೆ ಯೋಜನೆ ಕುರಿತು

267 (410) :ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):

ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಭದ್ರಾ ಮೇಲ್ದಂಡೆ ಯೋಜನೆಯು ಕೆಲಸ ಪ್ರಾರಂಭ ಮಾಡಲು ಸರ್ಕಾರವು ಆಲೋಚಿಸಿದೆಯೇ;

(ಆ) ಈ ಯೋಜನೆಯ ಕೆಲಸ ಪ್ರಾರಂಭವಾದರೆ ಎಷ್ಟು ಎಕರೆ ಅರಣ್ಯ ಪ್ರದೇಶವು ಮುಳುಗಡೆಯಾಗುತ್ತದೆ;

(ಇ) ಈ ಯೋಜನೆಯಿಂದ ಎಷ್ಟು ಟಿ.ಎಂ.ಸಿ. ನೀರನ್ನು ಸಂಗ್ರಹಿಸಲಾಗುತ್ತಿದೆ;

(ಈ) ಈ ಯೋಜನೆಯಿಂದ ಯಾವ ಯಾವ ಜಿಲ್ಲೆಗೆ ನೀರಾವರಿ ಸವಲತ್ತನ್ನು ಒದಗಿಸಲಾಗುತ್ತದೆ?

ಶ್ರೀ ಕೆ.ಎನ್.ನಾಗೇಗೌಡ(ಬೃಹತ್ ನೀರಾವರಿ ಮಂತ್ರಿಗಳು.)

(ಅ) ಭದ್ರಾ ಮೇಲ್ದಂಡೆ ಯೋಜನೆಯು ತುಂಗಭದ್ರಾ ತಿರುವು ಯೋಜನೆ ಎಂಬ ನಾಮಾಂಕಿತದೊಡನೆ ಅನ್ವೇಷಣೆಯಲ್ಲಿದೆ.

(ಆ) ಯೋಜನೆಯ ಅನ್ವೇಷಣೆಯು ಪೂರ್ಣಗೊಂಡ ನಂತರ ವಿವರಗಳು ಲಭ್ಯವಾಗುವುವು.

(ಇ) -ಮೇಲಿನಂತೆ-

(ಈ) -ಮೇಲಿನಂತೆ-

ಪುತ್ತೂರು ತಾಲ್ಲೂಕಿನ ಕಡಬ ವಿದ್ಯುತ್ ಸಬ್-ಸ್ಟೇಷನ್ ನಿರ್ಮಾಣ

272 (414) ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪುತ್ತೂರು ತಾಲ್ಲೂಕಿನ ಕಡಬ ವಿದ್ಯುತ್ ಸಬ್-ಸ್ಟೇಷನ್ ಕೆಲಸ ಕಾರ್ಯಗಳ ಕುಂಠಿತಗೊಳ್ಳಲು ಕಾರಣವೇನು;

(ಆ) ಯಾವಾಗ ಪೂರ್ತಿಗೊಂಡು ಕಾರ್ಯ ಪ್ರವೃತ್ತವಾಗುವುದು;

(ಇ) ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವ ಇಲಾಖೆ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು?

ಶ್ರೀ. ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು)

(ಅ) ಕಡಬದಲ್ಲಿ 33:11 ಕೆ.ವಿ. ಸಬ್-ಸ್ಟೇಷನ್ನಿನ ನಿರ್ಮಾಣ ಕಾರ್ಯವು ಮುಕ್ತಾಯ ಹಂತದಲ್ಲಿದ್ದು, ಈ ಸ್ಟೇಷನ್ ಚಾಲನೆಗಾಗಿ ಸಿದ್ಧಗೊಳ್ಳುತ್ತಿದೆ.

ಈ ಸ್ಟೇಷನ್ನಿಗೆ ಸಂಬಂಧಿಸಿದ ಪುತ್ತೂರು ಕಡಬ 33 ಕೆವಿ ಲೈನಿನ ನಿರ್ಮಾಣ ಕಾರ್ಯದಲ್ಲಿ ಉಂಟಾದ ವಿಳಂಬಕ್ಕೆ ಮುಖ್ಯ ಕಾರಣ ಅರಣ್ಯ ಇಲಾಖೆಯಿಂದ ಸಕಾಲದಲ್ಲಿ ಅರಣ್ಯ ತೆರವುಗೆ (ಫಾರಸ್ಟ್ ಕ್ಲಿಯರೆನ್ಸ್) ದೊರಕದೇ ಇದ್ದುದಾಗಿದೆ. ಅರಣ್ಯ ತೆರವಿಗಾಗಿ ಪ್ರಸ್ತಾವನೆಯನ್ನು ಅರಣ್ಯ ಇಲಾಖೆಗೆ ಫೆಬ್ರವರಿ 93ರಲ್ಲಿ ಸಲ್ಲಿಸಲಾಗಿತ್ತು. ಸುಧೀರ್ಘ ಪತ್ರ ವ್ಯವಹಾರ, ಚರ್ಚೆಗಳ ನಂತರ ಅಂತಿಮ ಅನುಮತಿ (ಕ್ಲಿಯರೆನ್ಸ್) ಅಕ್ಟೋಬರ್ 96 ರಲ್ಲಿ ದೊರಕಿತು.

(ಆ) ಬಾಕಿ ಉಳಿದ ಕಾರ್ಯಗಳನ್ನು ಪೂರ್ಣಗೊಳಿಸಿ ಈ ಸ್ಟೇಷನನ್ನು ಮಾರ್ಚ್ 97ರೊಳಗೆ ಕಾರ್ಯಾಚರಣೆಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

(ಇ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ವಿಳಂಬವು ಮುಖ್ಯವಾಗಿ ಸಕಾಲದಲ್ಲಿ ಅರಣ್ಯ ತೆರವು (ಫಾರೆಸ್ಟ್ ಕ್ಲಿಯರೆನ್ಸ್) ದೊರಕದೇ ಇದ್ದುದರಿಂದಾಗಿದೆ. ಆದ್ದರಿಂದ, ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಪಡಿತರ ಕಾರ್ಡುಗಳ ವಿತರಣೆ

273 (413) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಸಿರು ಕಾರ್ಡಿನಲ್ಲಿ ಗುರುತಿಗಾಗಿ ಫೋಟೋ ಹಚ್ಚುವ ಸಂದರ್ಭದಲ್ಲಿ ಹಳೆ ಪಡಿತರ ಕಾರ್ಡಿನ ಬದಲು ಹೊಸ ಕಾರ್ಡುಗಳನ್ನು ಕೊಡುವ ಆಲೋಚನೆ ಸರ್ಕಾರಕ್ಕಿದೆಯೇ;

(ಆ) ಹೊಸ ಪಡಿತರ ಕಾರ್ಡುಗಳ ವಿತರಣೆಯನ್ನು ಸ್ಥಗಿತಗೊಳಿಸಲು ಕಾರಣಗಳೇನು;